ಆ) ನಾಗಮಂಗಲ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ X-ray unit ಸ್ಥಾಪಿಸಿದ್ದು, ಟೆಕ್ನೀಷಿಯನ್‌ಗಳ ಕೊರತೆಯಿಂದ ಸಾರ್ವಜನಿಕರಿಗೆ ಉಪಯೋಗವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ; ಬಂದಿದ್ದರೆ ಸರ್ಕಾರದ ಕ್ರಮವೇನು ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ

ಆ) ಬಂದಿದೆ.

ಖಾಲಿ ಇರುವ ಕ್ಷ-ಕರಣ ತಂತ್ರಜ್ಞರ ಹುದ್ದೆಯನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ಮುಖಾಂತರ ನೇಮಕಾತಿ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. ಹಾಗೂ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಕಾರ್ಯ ಮುಗಿದಿದ್ದು, ಸಿಂಧುತ್ವ ಪ್ರಮಾಣ ಪತ್ರ ಮತ್ತು ಪೊಲೀಸ್ ವರದಿ ಬಂದ ಕೂಡಲೇ ಅತಿ ಶೀಘ್ರದಲ್ಲಿಯೇ ಭರ್ತಿ ಮಾಡಲಾಗುವುದು.

ನಾಗಮಂಗಲ ತಾಲ್ಲೂಕಿನಲ್ಲಿ ಬರಪರಿಹಾರ ಯೋಜನೆಯ ಕಾರ್ಯಗಳ ಪ್ರಗತಿ

3522(4110) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿದ್ದು ರಾಜ್ಯದಲ್ಲಿ ಮಳೆಯಾದ ಸಂದರ್ಭದಲ್ಲಿಯೂ ಸಹ ನಾಗಮಂಗಲ ತಾಲ್ಲೂಕು ಬರ ಪ್ರದೇಶದಿಂದ ಕೂಡಿದ್ದು ಈ ಪ್ರದೇಶಕ್ಕೆ ಯಾವುದಾದರು ವಿಶೇಷ ಯೋಜನೆಯಡಿಯಲ್ಲಿ ಬರ ಪರಿಹಾರ ಕಾರ್ಯಕ್ರಮ ಕೈಗೊಳ್ಳಲು ಪ್ರಸ್ತಾಪ ಸರ್ಕಾರದ ಮುಂದಿದೆಯೆ :

ಆ) ಹಾಗಿದ್ದಲ್ಲಿ, ಅದರ ವಿವರಗಳಾವುವು ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

ಅ) ಸತತ ಬರಗಾಲದಿಂದ ಸಮಸ್ಯೆಗೊಳಗಾಗಿರುವ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಸೇರಿದಂತೆ, ಎಲ್ಲಾ ತಾಲ್ಲೂಕುಗಳಲ್ಲಿಯೂ ಅಗತ್ಯ ಪರಿಹಾರ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು 2003-04ರ ಸಾಲಿನಲ್ಲಿ CRF / NCCF ನಡಿ ಜೂನ್ ಅಂತ್ಯಕ್ಕೆ ರೂ. 366.00 ಲಕ್ಷಗಳನ್ನು ಒದಗಿಸಲಾಗಿದೆ. ಇದಲ್ಲದೆ, ಮಂಡ್ಯ ಜಿಲ್ಲೆಯಲ್ಲಿನ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಕೊರೆಯಲು ರಾಜ್ಯ ಪಲಯದಡಿ ರೂ. 44.00 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ವಿಶೇಷವಾಗಿ ಬಿಡುಗಡೆ ಮಾಡಲಾಗಿದೆ, ಇವುಗಳಲ್ಲದೆ, ಬೇರೆ ಯಾವುದೇ ವಿಶೇಷ ಯೋಜನೆ ಸಧ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಉಪನ್ಯಾಸಕರ ಹಾಗೂ ಕೊಠಡಿಗಳ ಕೊರ

3523(4111) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಬರತಕ್ಕಂತಹ 16 ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಗಣಿತ ಮತ್ತು ವಿಜ್ಞಾನಶಾಸ್ತ್ರದ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಬಂದಿದ್ದರೆ, ತೆಗೆದುಕೊಂಡ ಕ್ರಮವೇನು :

ಅ) ಇದೇ ತಾಲ್ಲೂಕಿನ ಚಿನ್ಯಾ ಪ್ರೌಢಶಾಲೆಯಲ್ಲಿ 800 ವಿದ್ಯಾರ್ಥಿಗಳಿಗೆ 8 ಕೊಠಡಿಗಳಿದ್ದು, ವಿದ್ಯಾರ್ಥಿಗಳಿಗೆ ಪಾಠ ಪ್ರವಚನಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಬಂದಿದ್ದರೆ, ಇನ್ನೂ ಹೆಚ್ಚಿನ ಕೊಠಡಿಗಳನ್ನು ಒದಗಿಸಲು ತೆಗೆದುಕೊಂಡ ಕ್ರಮವೇನು ?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ನಾಗಮಂಗಲ ತಾಲ್ಲೂಕಿನಲ್ಲಿ ಒಟ್ಟು 6 ಸರ್ಕಾರಿ ಪದವಿಪೂರ್ವ ಕಾಲೇಜುಗಳಿದ್ದು, ಅವುಗಳಲ್ಲಿ ಕೇವಲ ಒಂದು ವಿಜ್ಞಾನ ಸಂಯೋಜನೆಯ ಪದವಿ ಪೂರ್ವ ಕಾಲೇಜಿದ್ದು ಅಲ್ಲಿ ಗಣಿತ ಮತ್ತು ವಿಜ್ಞಾನ ಉಪನ್ಯಾಸಕರ ಕೊರತೆ ಇಲ್ಲ.

ಆ) ನಾಗಮಂಗಲ ತಾಲ್ಲೂಕಿನ ಚೆನ್ಯಾ ಸರ್ಕಾರಿ ಪ್ರೌಢಶಾಲೆಯಲ್ಲಿ 8ನೇ ತರಗತಿಯಲ್ಲಿ 158, 9ನೇ ತರಗತಿಯಲ್ಲಿ 183 ಮತ್ತು 10ನೇ ತರಗತಿಯಲ್ಲಿ 126 ಒಟ್ಟು 467 ವಿದ್ಯಾರ್ಥಿಗಳು ಇದ್ದು ಈ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಹಾಲಿ 9 ಕೊಠಡಿಗಳಿರುತ್ತವೆ. ಇನ್ನೂ 4 ಕೊಠಡಿಗಳನ್ನು ಹೊಸದಾಗಿ ನಿರ್ಮಿಸಲಾಗುತ್ತಿದೆ.

ನಾಗಮಂಗಲ ಗ್ರಾಮೀಣ ಪ್ರದೇಶದಲ್ಲಿ ನಡೆಯುವಂತಹ ನಾಟಕಗಳಿಗೆ ಸಹಾಯಧನ ನೀಡುವ ಬಗ್ಗೆ

3524(4112) ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ (ಪೌರಾಣಿಕ ನಾಟಕಗಳು) ಸರಿಯಾದ ರೀತಿಯಲ್ಲಿ ಸಹಾಯಧನ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) 2001–2002 ಹಾಗೂ 2002–03ರ ವರೆಗೆ ನಾಗಮಂಗಲ ಗ್ರಾಮೀಣ ಪ್ರದೇಶದಲ್ಲಿ ನಡೆದಂತಹ ಯಾವ ಯಾವ ನಾಟಕಗಳಿಗೆ ಸಹಾಯಧನ ನೀಡಿದೆ (ವಿವರ ನೀಡುವುದು) ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು):

ಅ) ಇಲ್ಲ

ಆ) 1. 2001–2003ರ ಸಾಲಿನಲ್ಲಿ ಯಾವುದೇ ಕಾಯಕ್ರಮ ಕೋರಿ ಮನವಿಗಳು ಬಂದಿಲ್ಲ.

2. 2002–2003ನೇ ಸಾಲಿನಲ್ಲಿ 5 ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಲು ಅವಕಾಶ ನೀಡಿ ತಲಾ ರೂ. 5,000–ದಂತೆ ರೂ. 25,000– ವೆಚ್ಚ ಮಾಡಿದೆ ವಿವರ ಅನುಬಂಧದಲ್ಲಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎನ್. ಚಲುವರಾಯಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 411ಕ್ಕೆ ಅನುಬಂಧ

1. ವ್ಯವಸ್ಥಾಪಕರು 26.3.2002
ಆದಿಚುಂಚನಗಿರಿ ಕ್ಷೇತ್ರ
ಶ್ರೀ ಆದಿಲಕ್ಷ್ಮೀ ಮಿತ್ರ ಕಲಾ ಸಂಘ
ಜೊಡಿ ಚಿಕ್ಕಲಹಳ್ಳಿ, ನಾಗಮಂಗಲ ತಾ:
ಮಂಡ್ಯ ಜಿಲ್ಲೆ